# ಸಮಾನತೆ!

### ಬೆಳಿಗ್ಗೆ

'ಏಳೂವರೆ ಆಯ್ತು. ಇನ್ನೂ ಮಲಗೇ ಇದ್ದೀಯಲ್ಲ? ಎದ್ದೇಳು. ಎಷ್ಟು ಕೆಲಸ ಆಗಬೇಕು. ಬಿಸಿನೀರು ರೆಡಿಯಾಗಬೇಕು, ಮಕ್ಕಳಿಗೆ ಸ್ನಾನ ಮಾಡಿಸಬೇಕು, ತಿಂಡಿ ಸಿದ್ಧವಾಗಬೇಕು. ಹ್ಞಾ... ಅಮ್ಮನಿಗೆ ಗಂಜಿ ಮಾಡಬೇಕು, ಮರೆತುಬಿಡಬೇಡ. ನಿನ್ನೆ ನಾವು ತಿಂದ ತಿಂಡಿಯನ್ನು ಅವಳಿಗೆ ನೀಡಿದೆ. ಅದರಿಂದ ಅವಳ ಆರೋಗ್ಯ ಏರುಪೇರಾಗಿದೆ. ನಿನಗೆ ಸ್ವಲ್ಪಾನು ಜವಾಬ್ದಾರಿ ಇಲ್ಲ. ಹೂಂ... ಎದ್ದೇಳು.'

'ಮಕ್ಕಳಿಗೆ ಸ್ನಾನ ಆಯ್ತ? ಈಗ್ಲೆ ಯೂನಿಫಾರಂ ತೊಡಿಸಬೇಡ. ನಿನ್ನೆ ಬಟ್ಟೆ ಮೇಲೆಲ್ಲಾ ತಿಂಡಿ ಚೆಲ್ಲಿಕೊಂಡು ಗಲೀಜು ಮಾಡಿಸಿಕೊಂಡರು. ನೀನೇ ಸ್ವಲ್ಪ ತಿನ್ನಿಸಿದರೆ ಆಗೋದಿಲ್ವೆ?'

'ನಿನಗೆ ಎಷ್ಟು ಸಾರಿ ಹೇಳಿಲ್ಲ? ಸ್ನಾನದ ಮನೆಯಲ್ಲಿ ನನ್ನ ಬನಿಯನ್–ಟವಲ್‌ಗಳನ್ನು ಇಡು ಅಂತಾ. ಇದೇನು? ನೀರು ಉಗುರು ಬೆಚ್ಚಗಿದೆಯಲ್ಲ? ನನಗೆ ಸ್ವಲ್ಪ ಬಿಸಿ ಜಾಸ್ತಿ ಇರಬೇಕಂತಾ ನಿನಗೆ ಗೊತ್ತಿಲ್ವ?'

'ಅಮ್ಮನನ್ನು ಹನ್ನೊಂದು ಗಂಟೆಗೆ ಡಾಕ್ಟರ್ ಹತ್ರ ಕರೆದುಕೊಂಡು ಹೋಗಿ ಬಿಪಿ, ಸುಗರ್ ಟೆಸ್ಟ್ ಮಾಡಿಸಿಕೊಂಡು ಬಾ. ಆಟೋ ಮೆಲ್ಲಗೆ ಚಲಿಸಲು ಹೇಳು.'

'ಹಾ, ಮರೆತೆ, ಸ್ಕೂಲ್‌ನ ಬ್ರೇಕ್ ಟೈಮಲ್ಲಿ ಸ್ಕೂಲ್‌ಗೆ ಹೋಗಿ ಮಕ್ಕಳಿಗೆ ತಿಂಡಿ ತಿನ್ನಿಸಿ ಬಾ, ಇಲ್ಲದಿದ್ದರೆ ಅವ್ರು ತಿನ್ನೊಲ್ಲ.'

### ಮಧ್ಯಾಹ್ನ

'ಎಷ್ಟೊತ್ತು ಬೇಕು, ಫೋನ್ ತಕೋಳೋಕೆ? ಮಲಗಿದ್ದೀಯಾ? ಸದಾ ನಿದ್ದೆ!'

'ಅಮ್ಮನಿಗೆ ಡಾಕ್ಟರ್ ಹತ್ರ ಕರ್‍ಕೊಂಡೋಗಿದ್ದೀಯ? ಎಲ್ಲ ನಾರ್ಮಲ್ ಆಗಿದೆ ತಾನೆ? ಔಷಧಿ ತಂದೆಯೋ ಇಲ್ವೋ? ಇಲ್ಲದಿದ್ದರೆ, ಮತ್ತೆ ಸಂಜೆ ಹೋಗ್ಬೇಕಾಗುತ್ತೆ.'

'ಅಮ್ಮನಿಗೆ ಊಟ ಕೊಟ್ಟೆಯಾ? ಅವರಿಗೆ ಮಧ್ಯಾಹ್ನದ ನಿದ್ದೆಗೆ ಭಂಗ ಬರದಂತೆ ಟಿವಿಗೆ ಸೌಂಡ್ ಕೊಡಬೇಡ.'

'ಸ್ಕೂಲ್ ಬ್ರೇಕ್ ಟೈಮಲ್ಲಿ ಸ್ಕೂಲಿಗೆ ಹೋಗಿ ಮಕ್ಕಳಿಗೆ ತಿಂಡಿ ತಿನ್ನಿಸಿ ಬಂದೆಯಾ?'

'ಇಂದು ನೀನು ಕೊಟ್ಟ ಮಧ್ಯಾಹ್ನದ ಲಂಚ್ ಉಪ್ಪು, ಖಾರ ಏನೂ ಇಲ್ಲ. ಅಡಿಗೆ ಮಾಡುವಾಗ ಅದೇನ್ ಯೋಚನೆ ಮಾಡ್ತಿರ್‍ತಿಯೋ.'

'ಮಕ್ಕಳು ಶಾಲೆಯಿಂದ ಬರುವ ಹೊತ್ತಿಗೆ ಅವರಿಗೆ ಏನಾದರೂ ತಿಂಡಿ ಮಾಡಿಡು. ನನಗೂ ಅದನ್ನೇ ಕೊಟ್ಟರಾಯಿತು.'

### ಸಂಜೆ

'ಗಿಡಗಳಿಗೆ ನೀರೇ ಹಾಕಿಲ್ವಲ್ಲ, ಎಲ್ಲವು ಬಾಡಿ ಎಲೆ ಇಳಿಬಿದ್ದಿವೆ, ಏಕೆ? ದಿನಕ್ಕೆ ಹತ್ತು ಬಾರಿ ಕಾಂಪೌಂಡ್‌ನಲ್ಲಿ ತಿರುಗಾಡ್ತಿಯಾ, ಕಣ್ಣು ಕಾಣೋದಿಲ್ವೆ? ಅದಕ್ಕೆ ನೀರು ಹಾಕಿದ್ರೆ ನಿನಗೂ ವ್ಯಾಯಾಮವಾಗುತ್ತೆ.'

'ಅಮ್ಮನಿಗೆ, ಮಕ್ಕಳಿಗೆ ಸಂಜೆ ತಿಂಡಿ ಕೊಟ್ಟೆಯಾ? ಕೈಕಾಲ್ ತೊಳ್ಕೋ ಬರ್‍ತೀನಿ. ನನಗೆ ತಿಂಡಿ ಟೀ ರೆಡಿ ಮಾಡು.'

'ಯಾವಾಗ್ ನೋಡಿದ್ರು ಸೀರಿಯಲ್ಲು, ಸೀರಿಯಲ್ಲು. ಆ ಗೋಳನ್ನು ಏನ್ ನೋಡ್ತಿಯಾ? ಬೇಕಾದರೆ ನಾಳೆ ಮಧ್ಯಾಹ್ನ ರಿಪೀಟ್ ಆದಾಗ ನೋಡ್ಕೊ. ಈಗ ನಾನು ನ್ಯೂಸ್ ಕೇಳಬೇಕು.'

'ಮಕ್ಕಳು ಆಟ ಆಡಿದ್ದು ಸಾಕು. ಅವರನ್ನು ರೂಮಿಗೆ ಕರ್‍ಕೊಂಡು ಹೋಗಿ ಹೋಂ ವರ್ಕ್ ಮಾಡಿಸು. ಟಿವಿ ಸದ್ದು ಕೇಳಿಸದ ಹಾಗೆ ಬಾಗಿಲು ಹಾಕಿಕೋ.'

'ನೀನು ಆಗಲೇ ಕೊಟ್ಟ ಟೀ ಅಂತಾ ಬಿಸಿಯಿರಲಿಲ್ಲ. ಸ್ವಲ್ಪ ಸ್ಟ್ರಾಂಗಾಗಿ ಬಿಸಿ ಬಿಸಿ ಟೀ ಮಾಡಿ ತರ್‍ತೀಯಾ?'

### ರಾತ್ರಿ

'ಅಮ್ಮನಿಗೆ ಫ್ರೆಷ್ ಆಗಿ ಅನ್ನ ಮಾಡಿದ್ದೀಯಾ ತಾನೆ? ಮಧ್ಯಾಹ್ನದ ಅನ್ನವನ್ನೇ ಮತ್ತೆ ಬಿಸಿ ಮಾಡಿಕೊಟ್ಟರೆ ಅವರಿಗೆ ಜೀರ್ಣವಾಗೋಲ್ಲ.'

'ನೋಡು, ಮಕ್ಕಳು ಆಹಾರವನ್ನೆಲ್ಲ ಚೆಲ್ಲುತ್ತಿದ್ದಾರೆ. ನೀನೆ ಊಟ ಮಾಡಿಸಬಾರದೆ?'

'ಅಮ್ಮನಿಗೆ ಮಾತ್ರೆ ಎಲ್ಲ ನೀಡಿದೆಯಾ? ಅವರು ತೆಗೆದುಕೊಳ್ಳುವಂತೆ ನೋಡಿಕೊಳ್ಳಬೇಕು, ಗೊತ್ತಾ?'

'ಮಕ್ಕಳಿಗೆ ನಿದ್ರೆ ಬರುತ್ತಿದೆ. ಅವರಿಗೆ ಹಾಸಿಗೆ ರೆಡಿ ಮಾಡಿ ಮಲಗಿಸು.'

'ಎಲ್ಲ ಬಾಗಿಲುಗಳನ್ನು ಲಾಕ್ ಮಾಡಿ ಭದ್ರ ಮಾಡಿರುವಿಯಾ? ಮರೆತು ಹಾಗೇ ಬಂದು ಬಿಡಬೇಡ.'

'ಅದೇನು? ಅಡುಗೆ ಮನೆ ಬಿಟ್ಟು ಬರಲು ಅಷ್ಟುಹೊತ್ತು? ಆಗಲೇ ರಾತ್ರಿ ಹನ್ನೊಂದಾಯ್ತು. ಯಾಕೋ ಬೆನ್ನು ನೋಯ್ತಿದೆ. ಮುಲಾಮು ಹಚ್ಚಿ. ಸ್ವಲ್ಪ ಮಸಾಜು ಮಾಡು.'

'ಯಾಕೋ ಚಳಿ ಅನ್ನಿಸ್ತಿದೆ. ಸ್ವಲ್ಪ ಹತ್ತಿರ ಮಲಕ್ಕೋ.'

*(ಇಲ್ಲಿ ಕೇವಲ ಗಂಡು ಧ್ವನಿ ಕೇಳುತ್ತಿದೆ. ಆದರೆ ಹೆಣ್ಣಿನ ಧ್ವನಿ....?)*

■ **ಶಿಕಾಕು**

## ಮಾತೇ ಮುತ್ತು

★ ಯಾರಲ್ಲಿ ಮೂಢನಂಬಿಕೆ ಇರುವುದಿಲ್ಲವೋ, ಅವನನ್ನು ಮೃತ್ಯು ಕಿಂಚಿತ್ತೂ ಘಾಸಿಗೊಳಿಸಲಾರದು.

–ಚೆಸ್ಟರ್ ಫೀಲ್ಡ್

★ ಈ ಪ್ರಪಂಚದಲ್ಲಿ ಎರಡು ದುರಂತಗಳೆಂದರೆ– ನಮಗೆ ಬೇಕಾದದ್ದು ದೊರೆಯದಿರುವುದು ಹಾಗೂ ದೊರೆತು ಬಿಡುವುದು!

–ಆಸ್ಕರ್ ವೈಲ್ಡ್

★ ದೀರ್ಘಕಾಲ ಪರಿಣಾಮ ಬೀರುವ ಘಟನೆಗಳಿಗೆ ಮಹತ್ವ ನೀಡಬೇಕು. ಸಣ್ಣಪುಟ್ಟ ಆಗುಹೋಗುಗಳನ್ನು ನಿರ್ಲಕ್ಷಿಸುವವರೇ ಸುಖಿಗಳು.

–ಕನ್‌ಫ್ಯೂಷಿಯಸ್

★ ಅಭ್ಯಾಸಗಳ ಮೇಲೆ ಹಿಡಿತವಿಲ್ಲದಿದ್ದರೆ ಬಹುಬೇಗ ಅದರ ಫಲವನ್ನು ಅನುಭವಿಸಬೇಕಾಗುತ್ತದೆ.

–ಸಂತ ಅಗಸ್ಟೀನ್

★ ಗಂಗೆ ಸಮುದ್ರ ಸೇರಿದಾಗ ಗಂಗೆಯ ದೊಡ್ಡಸ್ತಿಕೆ ಇರುವುದಿಲ್ಲ. ಅದರ ಹೆಸರು ಅಳಿಸಿಹೋಗುತ್ತದೆ. ಅಂತೆಯೇ ಬೇರೆಯವರ ಮನೆಯಲ್ಲಿ ಆಶ್ರಯ ಪಡೆದಾಗ ನಮ್ಮ ಅಸ್ತಿತ್ವ ಇಲ್ಲದಂತಾಗುತ್ತದೆ.

–ರಹೀಮ

★ ನಮಗೆ ಬೇರೆಯವರು ಕೇಡು ಬಗೆದಾಗ, ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎಂದು ಜನರು ಕುತೂಹಲದಿಂದ ನೋಡುತ್ತಿರುತ್ತಾರೆ.

–ಆಲೂರು ವೆಂಕಟರಾಯರು

★ ಯಾರು ಪ್ರಶಂಸೆಯನ್ನು ಹೆಚ್ಚು ಹೆಚ್ಚು ಇಷ್ಟಪಡುತ್ತಾರೆ ಅವರಲ್ಲಿ ಯೋಗ್ಯತೆ ತೃಣಮಾತ್ರವೂ ಇರುವುದಿಲ್ಲ. ಯಾರಲ್ಲಿ ಯೋಗ್ಯತೆ ಇರುತ್ತದೆಯೋ ಅವನು ಆ ಕಡೆ ಗಮನ ಹರಿಸುವುದಿಲ್ಲ.

–ಮಹಾತ್ಮ ಗಾಂಧೀಜಿ

★ ಬದುಕು ಕರೆದುಕೊಂಡು ಹೋದ ಕಡೆ ನೀವು ಹೋಗದೆ, ನೀವು ಹೋದೆಡೆ ಬದುಕನ್ನು ಕರೆದುಕೊಂಡು ಹೋಗುವುದು ಜಾಣತನ.

–ವಿ.ಕೃ.ಗೋಕಾಕ

★ ಕನ್ನಡ ನನ್ನ ಮೊದಲ ಪ್ರೀತಿ. ಎರಡನೇ ಪ್ರೀತಿ ಅದೇ. ಅದರಲ್ಲಿ ಸವತಿ ಮಾತ್ಸರಕ್ಕೆ ಎಡೆಯಿಲ್ಲ.

–ಹಾ.ಮಾ.ನಾಯಕ

★ ಯಾರು ತನ್ನ ಇಚ್ಛೆಯ ಮೇಲೆ ವಿಜಯಿಯಾಗುತ್ತಾನೆ, ಅವನು ತನ್ನ ಕರ್ತವ್ಯದಿಂದ ವಿಮುಖನಾಗುವುದಿಲ್ಲ. ಹಿಮಾಲಯದಂತೆ ಅವನು ಅಚಲನಾಗಿರುತ್ತಾನೆ.

–ತಿರುವಳ್ಳುವರ್

★ ಸ್ವಾರ್ಥದಿಂದ ತುಂಬಿದ ಮನಸ್ಸಿನ ಪ್ರೀತಿಯಿಂದ ಪ್ರಯೋಜನವಿಲ್ಲ. ಕೈಕುಲುಕಬಹುದು, ಆಲಂಗಿಸಿಕೊಳ್ಳಬಹುದು. ಆದರೆ ತಲೆಗೆ ತಲೆ ಡಿಕ್ಕಿ ಹೊಡೆಯಬಾರದು. ಹಾಗಿದ್ದರೆ ಮಾತ್ರ ಏಕತೆ ಎನ್ನಲು ಸಾಧ್ಯ.

–ಪ್ರೇಮ್‌ಚಂದ್